

# ಒಬ್ಬರೆ

ಗುಂಡ ಪ್ರತಿದಿನ ಸಹ್ಯಾದ್ರಿ ಬಸ್ಸಿನಲ್ಲಿ ಮೇಗರವಳ್ಳಿಯಿಂದ ತೀರ್ಥಹಳ್ಳಿಗೆ ಹೋಗಿ ರಾತ್ರಿ ಅದೇ ಬಸ್ಸಿಗೆ ಹಿಂತಿರುಗುತ್ತಿದ್ದನು.
ಒಂದು ದಿನ ಬೆಳಗ್ಗೆ ಪರಿಚಿತ ಡ್ರೈವರ್ ಅವನನ್ನು ಕೇಳಿದ:
'ನಿನ್ನೆ ರಾತ್ರಿ ತುಂಬಾ ಕುಡಿದಿದ್ರಾ?'
'ಯಾಕೆ?'
'ನೀವು ರಾತ್ರಿ ಆ ಹುಡುಗಿಗೆ ಸೀಟು ಬಿಟ್ಟು ಕೊಟ್ಟಾಗಲೇ ಗೊತ್ತಾಯಿತು.'
'ಹೇಗೆ?'
'ನಿನ್ನೆ ರಾತ್ರಿ ಇಡೀ ಬಸ್ಸು ಖಾಲಿ ಇತ್ತು...'

**ತೈರೊಳ್ಳಿ ಮಂಜುನಾಥ ಉಡುಪ**

# ಪತಿಯ ಫಜೀತಿ!

ಗೋಪಿ ಕಚೇರಿಗೆ ತಲುಪಿದಾಕ್ಷಣ ಮಡದಿ ರತ್ನಾಳ ಕರೆ ಬಂತು, 'ಇವತ್ತು ತಾರೀಖು ಎಷ್ಟು?' ಅಚ್ಚರಿಗೊಂಡ ಗೋಪಿ ಉತ್ತರಿಸಿದ, 'ಮಾರ್ಚ್ 10...' ಕೂಡಲೇ ಆಕೆ ಕರೆ ಕತ್ತರಿಸಿದಳು. ಈತ ಯೋಚಿಸುತ್ತಾ ನೆನಪು ಮಾಡಿಕೊಳ್ಳಲಾರಂಭಿಸಿದ... 'ಮಾರ್ಚ್ 10 ಅವಳ ಜನ್ಮದಿನ? ಅಲ್ಲ. ನನ್ನದು? ಅಲ್ಲ. ಮದುವೆಯ ವಾರ್ಷಿಕೋತ್ಸವ? ಅಲ್ಲ. ಪುಟ್ಟನ ಬರ್ತ್ ಡೇ? ಅದೂ ಅಲ್ಲ. ಗ್ಯಾಸ್ ಬುಕಿಂಗ್? ಆಗಿದೆ. ವಿದ್ಯುತ್ ಬಿಲ್? ಬಂದಿಲ್ಲ...' ಹಾಗಾದರೆ ಆ ದಿನಾಂಕವನ್ನು ಆಕೆ ಯಾಕೆ ಕೇಳಿದಳು ಎನ್ನುವ ಪ್ರಶ್ನೆ ದಿನ ಪೂರ್ತಿ ಆತನನ್ನು ಕಾಡಿತು.
ಸಂಜೆ ಮನೆಗೆ ತಲುಪಿದಾಗ ಪುಟ್ಟ ಕಾರ್ ಪಾರ್ಕಿಂಗ್‌ನಲ್ಲಿ ಆಟವಾಡುತ್ತಿದ್ದ. ಆತನನ್ನು ವಿಚಾರಿಸಿದ, 'ಅಡುಗೆ ಮನೆಯ ವಾತಾವರಣ ಹೇಗಿದೆ? ಪಾತ್ರೆಗಳು ಎಗರಾಡುತ್ತಿಲ್ಲ ತಾನೆ?'
ಪುಟ್ಟ ಹೇಳಿದ, 'ಇಲ್ಲ, ಎಲ್ಲಾ ಸರಿಯಾಗಿದೆ. ಯಾಕೆ, ಏನಾಯಿತು?'
'ನಿನ್ನಮ್ಮ ಇವತ್ತು ದಿನಾಂಕ ಎಷ್ಟೆಂದು ಬೆಳಗ್ಗೆ ಕೇಳಿದ್ದಳು ಕಣೋ...'
ಪುಟ್ಟ ನಕ್ಕು, 'ಓ ಅದಾ, ಮುಂಜಾನೆ ಕ್ಯಾಲೆಂಡರಿನ ಕೆಲವು ಪುಟಗಳನ್ನು ನಾನು ಹರಿದಿದ್ದೆ, ಅಮ್ಮನಿಗೆ ತಾರೀಖು ಎಷ್ಟು ಎಂದು ಸರಿಯಾಗಿ ತಿಳಿದಿರಲಿಲ್ಲ...'
ಗೋಪಿಗೆ ಹೋದ ಜೀವ ಬಂದಂತಾಯಿತು!

**ರಮಣ್ ಶೆಟ್ಟಿ ರೆಂಜಾಳ್**

